ಇ) ಸರ್ಕಾರವು ಲೈನ್‌ಮನ್‌ಗಳ ಕೊರತೆಯ ಸಮಸ್ಯೆಯನ್ನು ಮನಗಂಡಿದ್ದು. ಇದರ ನಿವಾರಣೆಗಾಗಿ ತಾತ್ಕಾಲಿಕ ಗ್ಯಾಂಗ್‌ಮನ್‌ಗಳ ಸೇವೆಯನ್ನು ಉಪಯೋಗಿಸಿಕೊಳ್ಳಲು ಕ್ರಮಗಳನ್ನು ಜರುಗಿಸಲಾಗಿದೆ.

ಈ) ಉಡುಪಿ ಜಿಲ್ಲೆಯಲ್ಲಿ 186 ಮಂದಿ ತಾತ್ಕಾಲಿಕ ಗ್ಯಾಂಗ್ ಮೆನ್‌ಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ. ಇವರುಗಳ ಸೇವೆಯನ್ನು ಲೈನ್‌ಮನ್‌ಗಳಂತೆ ಉಪಯೋಗಿಸಿಕೊಳ್ಳಲಾಗುತ್ತಿದೆ. ಉಡುಪಿ ತಾಲ್ಲೂಕಿನಲ್ಲಿ ಲಭ್ಯವಿರುವ ಗ್ಯಾಂಗ್‌ಮೆನ್‌ಗಳ ಸಂಖ್ಯೆ 12 (ಹಿರಿಯಡ್ಕ–7, ಪಡುಕೆರೆ ಉದ್ಯಾವರ 5)

616(487) : ಶ್ರೀ ರಘುಪತಿ ಭಟ್ ಕೆ. (ಉಡುಪಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಲ್ಲಿ ಕೃಷಿಕರ ಪಂಪ್‌ಸೆಟ್‌ಗೆ ಸಂಪರ್ಕ ನೀಡುವಲ್ಲಿ ಆಗುತ್ತಿರುವ ವಿಳಂಬ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಇಂತಹ ಎಷ್ಟು ಅರ್ಜಿಗಳು ಉಡುಪಿಯಲ್ಲಿ ಬಾಕಿ ಇವೆ;

ಇ) ಕೃಷಿಕರು ಸಂಪರ್ಕ ಬೇಕಿದ್ದಲ್ಲಿ ರೂ. 25,000 ಠೇವಣಿ ಪಾವತಿಸಿ ಪ್ರತ್ಯೇಕ ಟ್ರಾನ್ಸ್‌ಫಾರ್ಮರ್ ಅಳವಡಿಸಬೇಕೆಂಬ ನಿರ್ಬಂದ ಹೇರಿರುವುದು ನಿಜವೇ;

ಈ) ಕೃಷಿ ಪಂಪ್‌ಗಾಗಿ ಉಡುಪಿ ಜಿಲ್ಲೆಯಲ್ಲಿ ನೋಂದಾಯಿತ ಅರ್ಜಿಗಳ ಸಂಖ್ಯೆ ಎಷ್ಟು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹೌದು. ಗಮನಕ್ಕೆ ಬಂದಿದೆ. ಉಡುಪಿ ಜಿಲ್ಲೆಯಲ್ಲಿ ನೀರಾವರಿ ಪಂಪುಸೆಟ್ಟುಗಳಿಗೆ ಆದ್ಯತಾಪಟ್ಟಿಯಲ್ಲಿನ ಹಿರಿತನದ ಆಧಾರದ ಮೇಲೆ ಆರ್ಥಿಕ ಸಂಪನ್ಮೂಲಗಳ ಲಭ್ಯತೆಗನುಗುಣವಾಗಿ ವಿದ್ಯುತ್ ಸಂಪರ್ಕವನ್ನು ಕಲ್ಪಿಸಬೇಕಾಗಿರುವುದರಿಂದ. ಈ ಕಾರ್ಯವು ವಿಳಂಭವಾಗುತ್ತಿದೆ.

ಆ) ಉಡುಪಿ ಜಿಲ್ಲೆಯಲ್ಲಿ 317 ಅರ್ಜಿಗಳು ವಿದ್ಯುತ್ ಸಂಪರ್ಕಕ್ಕಾಗಿ ಬಾಕಿ ಉಳಿದಿರುತ್ತದೆ.

ಇ) ದಿನಾಂಕ 21–10–2003ರ ಸರ್ಕಾರಿ ಆದೇಶದ ಪ್ರಕಾರ ನೀರಾವರಿ ಪಂಪುಸೆಟ್ಟುಗಳ ಅರ್ಜಿಗಳನ್ನು "ಸ್ವಯಂ ಪರಿವರ್ತಕ ಹೊಂದುವ" (ಒ.ವೈ.ಟಿ.) ಯೋಜನೆಯಡಿಯಲ್ಲಿ ಸ್ವೀಕರಿಸಬೇಕಾಗಿದೆ. ಈ ಯೋಜನೆಯಲ್ಲಿ ರೈತ ಗ್ರಾಹಕರು ರೂ. 25000/–ಗಳನ್ನು ಒಟ್ಟಾರೆಯಾಗಿ ಇಲ್ಲವೆ ಎರಡು ಕಂತುಗಳಲ್ಲಿ ಪಾವತಿಸಬೇಕಾಗುತ್ತದೆ. ನೀರಾವರಿ ಪಂಪುಸೆಟ್ಟುಗಳಿಗೆ ಈ ಯೋಜನೆಯಡಿಯಲ್ಲಿ ಒಂದು ಪ್ರತ್ಯೇಕ ಟ್ರಾನ್ಸ್‌ಫಾರ್ಮರ್ ಅಳವಡಿಸಿ ಸಂಪರ್ಕ ಕಲ್ಪಿಸಲಾಗುವುದು.

ಈ) ಉಡುಪಿ ಜಿಲ್ಲೆಯಲ್ಲಿ ಕೃಷಿ ಪಂಪ್‌ಸೆಟ್‌ಗಾಗಿ ವಿದ್ಯುತ್ ಕೋರಿ ನೋಂದಾಯಿಸಿರುವ ಅರ್ಜಿಗಳ ಸಂಖ್ಯೆ: 6298.